

ಚಿತ್ರ: ಎ.ಎನ್. ಮುಕುಂದ

- **ಕವಿತೆಯ ಬೀಜ ನಿಮ್ಮೊಳಗೆ ಮೊಳಕೆಯೊಡೆದಿದ್ದು ನಿಮ್ಮ ಬಾಲ್ಯದಲ್ಲಿ, ಆ ಬೀಜ ಈಗ ಹೆಮ್ಮರವಾಗಿ ಬೆಳೆದು ಕನ್ನಡ ಕಾವ್ಯ ಲೋಕ ಗಮನಿಸುವಂತಹ ಹಲವು ಕವಿತಾ ಫಲಗಳನ್ನು ನೀಡಿದೆ... ನೀವು ಕವಿತೆಯನ್ನು, ಕವಿತೆಯು ನಿಮ್ಮನ್ನು ಪರಸ್ಪರ ಕೈ ಹಿಡಿದು ಸಾಗಿಬಂದ ಇಷ್ಟು ವರುಷಗಳ ಸಹ ಪಯಣ ತಿಟ್ಟತ್ತಿ ತಿರುಗಿ ನೋಡಿದರೆ ಈಗ ಹೇಗೆನಿಸುತ್ತದೆ?**

ನನ್ನ ಮನೆಯಲ್ಲಿ ಅಥವಾ ಹೊರಗೆಲ್ಲೂ ನನಗೆ ಬಾಲ್ಯದಲ್ಲಿ ಕವಿತೆಯ ಪರಿಚಯ ಆಗಿದ್ದಿಲ್ಲ. ಒಂದು ಕವನ ಸಂಕಲನವನ್ನೂ ನಾನು ಬಾಲ್ಯದಲ್ಲಿ ಓದಿದ್ದಿಲ್ಲ. ಮನೆಯಲ್ಲಿ ನನ್ನ ತಮ್ಮನೊಬ್ಬನಿಗೆ ಬಹಳ ಅನಾರೋಗ್ಯ ಕಾಡುತ್ತಿತ್ತು. ಅವನು ಮೂರು ತಿಂಗಳ ಮಗುವಾಗಿದ್ದಾಗಿನಿಂದ ಕಾಯಿಲೆಯಿಂದ ಬಳಲುತಿದ್ದ; ಆದ್ದರಿಂದಲೇ ಏನೋ ಸದಾ ಕಾಲ ಅಳುತ್ತಿದ್ದ. ಅವನ ನೋವು ನನ್ನಿಂದ ನೋಡಲಾಗುತ್ತಿರಲಿಲ್ಲ. ಈ ಕಾರಣಕ್ಕೆ ಬಾಲ್ಯದಲ್ಲಿ ನಾನು ಆದಷ್ಟು ಮನೆಯ ಹೊರಗೆ ಕಾಲ ಕಳೆಯಲು ಇಷ್ಟ ಪಡುತ್ತಿದ್ದೆ. ಶಿವಮೊಗ್ಗದ ಜಯನಗರದಲ್ಲಿ ನಮ್ಮ ಮನೆಯಿತ್ತು. ನಾನಾಗ ಮೂರು, ನಾಲ್ಕನೇ ಕ್ಲಾಸಿನ ಹುಡುಗಿ, ನಮ್ಮ ಮನೆ ಎದುರಿಗೆ ರಾಗಿಗುಡ್ಡದ ಬಟ್ಟಬಯಲು ಕಾಣುತ್ತಿತ್ತು. ಅಲ್ಲಿ ಕಾಮನಬಿಲ್ಲು ಮೂಡಿದಾಗ ಆ ಗುಡ್ಡದ ಮೇಲೆ ಮಳೆಬಿಲ್ಲು ಬೆಳೆದು ಇಡೀ ಗುಡ್ಡವನ್ನು ಆವರಿಸಿದಂತೆ